

ವಿಶಾಲವಾದ ಕೊಠಡಿ. ಎರಡು ಮಂಚಗಳು. ಆಚೆ ಬದಿಯ ಮಂಚದ ಮೇಲೆ ಯಾರೋ ಮಲಗಿದ್ದರು. ಈಚೆ ಬದಿಯ ಮಂಚದ ಪಕ್ಕದಲ್ಲಿ ತಳ್ಳು ಕುರ್ಚಿಯ ಮೇಲೆ ಕೃಶಕಾಯದ ವ್ಯಕ್ತಿಯೊಬ್ಬ ಕುಳಿತಿದ್ದ.

'ನಾವು ಭಾಸ್ಕರರಾಯರನ್ನು ಕಾಣಬೇಕಿತ್ತು' ಆ ವ್ಯಕ್ತಿಯನ್ನುದ್ದೇಶಿಸಿ ಅಂದೆ ನಾನು.

'ಬನ್ನಿ... ಕೋಣೆಯ ಬಾಗಿಲು ಮುಚ್ಚಿ ಬನ್ನಿ. ಕುಳಿತುಕೊಳ್ಳಿ' ತನ್ನ ಎದುರು ಇದ್ದ ಕುರ್ಚಿಯತ್ತ ಕೈಮಾಡಿ ಅಂದ ಆ ಕೃಶಕಾಯದ ವ್ಯಕ್ತಿ.

ಕೊಠಡಿಯ ಬಾಗಿಲು ಮುಚ್ಚಿದೆ.

ಕೊಠಡಿ ತೀರಾ ಅಸ್ತವ್ಯಸ್ತವಾಗಿತ್ತು. ಕಿಟಕಿಯ ಸರಳಿನಿಂದ ಬಾಗಿಲ ತುದಿಯ ಮೇಲ್ಬದಿಯ ಮೊಳೆಯೊಂದಕ್ಕೆ ಕಟ್ಟಿದ್ದ ನೇಲೆಯ ಮೇಲೆ ತೂಗಾಡುತ್ತಿದ್ದ ಬಟ್ಟೆ ಬರೆಗಳು. ನೋಡಿದರೆ ಅವನ್ನು ತೊಳೆಯದೆ ಯಾವ ಕಾಲವಾಯಿತೋ ಎನ್ನುವಂತಿದ್ದವು. ಒಂದು ಬಗೆಯ ಕೆಟ್ಟ ವಾಸನೆ ಕೊಠಡಿಯಲ್ಲಿ. 'ಕುಳಿತುಕೊಳ್ಳಿ' ಎಂದು ನಮಗೆ ತೋರಿಸಿದ್ದ ಕುರ್ಚಿಯ ಮೇಲೆ ದೂಳು.

ಕುರ್ಚಿಯ ದೂಳನ್ನು ಕೈಯ್ಯಲ್ಲಿ ಹಿಡಿದಿದ್ದ ಕರ್ಚೀಫ್‌ನಿಂದ ಹೊಡೆದು ಕುಳಿತೆ. ಮತ್ತೊಂದು ಕುರ್ಚಿಯ ದೂಳು ಹೊಡೆದು ಮಂಗಲಾಳೂ ಕುಳಿತುಕೊಂಡಳು.

'ಹೇಳಿ... ಏನಾಗಬೇಕಿತ್ತು?' ಆತ ಕೇಳಿದ.

'ಅದೇ... ನಾವು ಭಾಸ್ಕರರಾಯರನ್ನು ಕಾಣಬೇಕಾಗಿತ್ತು' ಪುನಃ ಅಂದೆ ನಾನು.

'ನಾನೇ ಭಾಸ್ಕರರಾಯ... ಹೇಳಿ, ಏನೂಂತ.'

ನನಗೆ ನಂಬಲಾಗಲಿಲ್ಲ; ಬಹುಶಃ ಮಂಗಲಾಳಿಗೂ. ನಾನು ಕಲ್ಪಿಸಿಕೊಂಡಿದ್ದ ವಳಗೆರೆಯ ಭಾಸ್ಕರರಾಯರೇ ಬೇರೆ: ಕಟ್ಟುಮಸ್ತಾದ ದಢೂತಿ ಆಸಾಮಿ; ಪೊಗದಸ್ತು ಹುರಿ ಮೀಸೆ, ಜಬರ್ದಸ್ತು ವೇಷಭೂಷಣ, ದರ್ಪ, ಅಹಂಕಾರದ ಪ್ರತಿರೂಪ. ಊಹ್ಞೂಂ... ತಾವೇ ಭಾಸ್ಕರರಾಯ ಎನ್ನುತ್ತಿರುವ ಈ ಇವರು ಬಡಕಲು ಆಸಾಮಿ. ಕುರುಚಲು ಗಡ್ಡ; ಮಾಸಲು ವಸ್ತ್ರ; ಬಾಚದ ತಲೆ; ಗುಳಿಬಿದ್ದ ಕಣ್ಣುಗಳು, ತಳ್ಳು ಕುರ್ಚಿಯ ಮೇಲೆ ಕುಳಿತಿದೆ ಆಸಾಮಿ..

'ನಂಬಲಾಗುತ್ತಿಲ್ಲ ಅಲ್ಲವೇ? ನಿನಗೆ ಮಾತ್ರವೇನು... ನಿನ್ನ ಚಿಕ್ಕಮ್ಮನಿಗೂ ನಾನೇ ಭಾಸ್ಕರರಾಯ ಎನ್ನುವುದನ್ನು ಮೊದಲು ನಂಬಲಾಗಿರಲಿಲ್ಲ. ನಿನ್ನ ಚಿಕ್ಕಮ್ಮ ಮಾತ್ರವಲ್ಲ, ಮೊದಲ ಸಲ ನನ್ನ ನೋಡುವ ಯಾರೂ ನಾನು ವಳಗೆರೆಯ ಭಾಸ್ಕರರಾಯ ಎಂದರೆ ಬುಡಪಟ್ಟಿಗೆ ನಂಬುವುದಿಲ್ಲ. ಹೊರಗಿನಿಂದ ಅಂದುಕೊಳ್ಳುವುದೇ ಬೇರೆ; ಒಳಗೆ ಬಂದಾಗ ವಿದಿತವಾಗುವ ಸಂಗತಿಯೇ ಬೇರೆ' ಎಂದು ಆ ಭಾಸ್ಕರರಾಯ ಎನ್ನುವವರು 'ಹೇಳಿ, ನಿಮ್ಮ ತಮ್ಮಂದಿರು ಅಂದರೆ, ನಿಮ್ಮ ಚಿಕ್ಕಪ್ಪ ಚಿಕ್ಕಮ್ಮನ ಮಕ್ಕಳು ತಮ್ಮ ಅಪ್ಪ ಅಮ್ಮ ಮತ್ತು ತಮ್ಮ ತಂಗಿ ಈ ಹುಡುಗಿಯನ್ನು ಮನೆಯಿಂದ ಹೊರ ಹಾಕಿದ್ದಾರೆ ಅಲ್ಲವಾ?' ಎಂದರು.

'ಹೌದು' ಎನ್ನುವಂತೆ ತಲೆ ಆಡಿಸಿದೆ ನಾನು.

ಆಚೆ ಬದಿಯ ಮಂಚದಲ್ಲಿ ಮಲಗಿದ್ದ ವ್ಯಕ್ತಿ ಮೆಲ್ಲನೆ ನರಳಿತು.

